ಆಸ್ತಿ. ಅಲ್ಲೊಂದು ಸೈಟು, ಇಲ್ಲೊಂದು ಕಂಪನಿ. ಜಾತಕದಲ್ಲಿ ಗುರು ಅಲ್ಲಿ, ಶನಿ ಇಲ್ಲಿ – ಎಷ್ಟು ಲೆಕ್ಕಾಚಾರಗಳು ಗೊತ್ತಾ? ತಮಾಷೆಯೇನಂದ್ರೆ ಈ ಯಾವ ಲೆಕ್ಕಾಚಾರದಲ್ಲೂ ನನಗೇನು ಇಷ್ಟ ಎನ್ನುವ ಅಂಶವೇ ಇಲ್ಲ!''

''ನಿಮಗೇನು ಇಷ್ಟ?''

ನಿಟ್ಟುಸಿರಿನದೇ ಮಾತಿನ ರೂಪವೆಂಬಂತೆ ನುಡಿದವಳಿಗೆ ಉಸಿರಿನಷ್ಟೇ ನಯವಾದ ಸ್ವರದಲ್ಲಿ ಆ ಪ್ರಶ್ನೆ ಕೇಳಿದ. ಪ್ರತಿಯಾಗಿ ಅತ್ತಕಡೆಯಿಂದ ಬಿಕ್ಕಿನ ಧ್ವನಿ ಭಾವಲಹರಿಯ ಮೊನಚು ಮೊನೆಯಂತೆ ತೇಲುತ್ತಾ ಬಂದು ಅವನ ಕಿವಿಯನ್ನು ಇರಿಯಿತು.

''ನನಗೆ... ನನಗೆ... ನನ್ನನ್ನು ಅರ್ಥಮಾಡಿಕೊಳ್ಳುವವನು ಇಷ್ಟ. ಕಡಿಮೆ ಸಂಬಳವಾದರೂ ಪರವಾಗಿಲ್ಲ, ನನ್ನನ್ನು ಪ್ರೀತಿಸುವವನು ಇಷ್ಟ. ಹಳ್ಳಿಯ ಮಡಿಲಿನ ಪುಟ್ಟ ಹಂಚಿನ ಮನೆಯಲ್ಲಿ ಮನೆಕೆಲಸ ಮಾಡಿ ದಣಿಯುವ ನನಗೆಂದೇ ತೋಟದ ಹೂವೊಂದನ್ನ ಕೊಯ್ದು ತರುವವನು ಇಷ್ಟ. ಹಣ, ಆಸ್ತಿ, ಅಂತಸ್ತುಗಳೆಲ್ಲದರಾಚೆಗೂ ಇರುವ ಅಪ್ಪಟ ಬದುಕನ್ನು ಪ್ರೀತಿಸುವ ಸಾಮಾನ್ಯ ವ್ಯಕ್ತಿಯೇ ನನಗಿಷ್ಟ. ಹೇಳಿ ರಾಜಿ... ನನಗೆ ಅಂಥವನೇ ಸಿಗ್ತಾನೆ ಅಲ್ವಾ?''

ಕಿಟಕಿಯಾಚೆಗೆಲ್ಲೋ ಹಕ್ಕಿಯೊಂದು ನವಿರಾಗಿ ಉಲಿಯಿತು. ಹಾದು ಬಂದ ತಂಗಾಳಿ ಹೊತ್ತು ತಂದ ಹೂ ಘಮದ ಸಮೇತ ನೇರ ಎದೆಯನ್ನೇ ಹೊಕ್ಕಂತಾಯಿತು.

''ಹೇಳಿ ಗೋಪೀ... ಸಿಗ್ತಾನೆ ಅಲ್ವಾ?''

ಅವಳು ಪುನರುಚ್ಚರಿಸಿದಳು.

''ಸಿಗುತ್ತಾನೆ ಮಂಗಳಾ... ಸಿಕ್ಕೇ ಸಿಗುತ್ತಾನೆ. ಚಾಚುವ ಹಾಗೂ ಬಾಚುವ ಕೈಗಳೆರೆಡನ್ನೂ ಪರಸ್ಪರ ಸೇರಿಸಲೆಂದೇ ಮೇಲೊಬ್ಬ ಕುಳಿತಿದ್ದಾನೆ. ಅವನು ಖಂಡಿತಾ ನೀವು ಬಯಸಿದವನನ್ನೇ ನೀಡುತ್ತಾನೆ.''

'ಸಿಗುತ್ತೇನೆ' ಎಂಬ ಪದವನ್ನು 'ಸಿಗುತ್ತಾನೆ' ಎಂದು ತಪ್ಪಾಗಿ ಹೇಳಿಬಿಟ್ಟೆನೇನೋ ಅನ್ನಿಸಿತು ರಾಜೀವನಿಗೆ.

''ಅಲ್ಲಾ, ನನ್ನ ಮನಸ್ಸಿನ ಲೆಕ್ಕಾಚಾರಗಳನ್ನೆಲ್ಲಾ ಇಷ್ಟು ಮುಕ್ತವಾಗಿ ನಿಮ್ಹತ್ರ ಹೇಳ್ಕೊಳ್ತಿದೀನಲ್ಲಾ, ಅಷ್ಟಕ್ಕೂ ನೀವು ಯಾರು ನನಗೆ?''

ತಾನು ಕೇಳಬಯಸುತ್ತಿರುವ ಉತ್ತರವನ್ನು ಪ್ರಶ್ನೆಯಲ್ಲೇ ಮುಚ್ಚಿಟ್ಟಂತೆ ಕೇಳಿದಳು ಮಂಗಳಾ. ತುಟಿಯಂಚಿನಲ್ಲಿ ತುದಿಗಾಲಿನಲ್ಲಿ ನಿಂತಿರುವ ಆ ಸವಿಸತ್ಯವನ್ನು ಮರೆಮಾಚುತ್ತಾ ಅವನು ನುಡಿದ:

''ಇನ್ನೊಮ್ಮೆ ಹೇಳ್ತೀನಿ.''

''ನಿಜವಾಗ್ಲೂ ಹೇಳ್ತೀರಾ?''

''ನಿಜವಾಗ್ಲೂ ಹೇಳ್ತೀನಿ.''

''ನಾನು ಕಾಯ್ತಿರ್ತೀನಿ...''

''ಗುಡ್ ನೈಟ್.''

''ಗುಡ್ ನೈಟ್.''

ಒಲ್ಲದ ಮನಸ್ಸಿನಿಂದ ಸಂಪರ್ಕ ಕತ್ತರಿಸಿದ ರಾಜೀವ ಹಾಸಿಗೆಗೆ ಒರಗಿಕೊಂಡ. ಬಹಳ ದಿನಗಳ ನಂತರ ಚಂದದ ಕನಸೊಂದು ತನಗಾಗೇ ಕಾಯುತ್ತಿರುವಂತೆ ಮನಸ್ಸೆಲ್ಲಾ ಉಲ್ಲಾಸಮಯವಾಗಿತ್ತು.

''ಮುನ್ನ ಇಂತಿರದಾದೆ ನಿನ್ನ ಬೇಡದೆ ಹೋದೆ
ಕೈಹಿಡಿದು ನಡೆಸೆನ್ನನೂ''

ಹೊರಗಿನ ನಿರ್ಜನ ರಸ್ತೆಯಲ್ಲಿ ಕಾರೊಂದು ಅವನೆದೆಯದೇ ಹಾಡನ್ನು ಗುನುಗುತ್ತಾ ಹಾದುಹೋಯಿತು.